ದಿನಾಂಕ **:** 28.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ. ರವರಿಂದ**

*ಸಾಕ್ಷಿಯು ರಾಡನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.**1** ಎಂದು ಗುರುತಿಸಲಾಯಿತು.*

***ಪಾಟೀ ಸವಾಲು ಆರೋಪಿಗಳ ಪರ ಶ್ರೀ ಕೆ.ವಿ.ಕೆ. ವಕೀಲರಿಂದ :***

*ಆರೋಪಿಗಳು ನನ್ನ ಸಂಬಂಧಿಕರು . ಅವರು ನನ್ನ ದೊಡ್ಡಪ್ಪನ ಮಕ್ಕಳು . ಗಲಾಟೆಯಾದ ಜಮೀನಿನ ನಂಬರು ನನಗೆ ಗೊತ್ತಿಲ್ಲ . ನಮ್ಮ ತಂದೆಯ ಮೇಲೆ ಆರೋಪಿಗಳು ಗಲಾಟೆ ಮಾಡುವಾಗ ಅವರ ಮನೆಯವರು ಮಾತ್ರ ಇದ್ದರು . ನನ್ನ ಮನೆಯ ಪಕ್ಕ ಹಲವಾರು ಮನೆಗಳು ಹೊಂದಿಕೊಂಡಂತೆ ಇವೆ ಎಂದರೆ ಸರಿ . ಆರೋಪಿ ನಂ.**1** ಮತ್ತು **2** ರವರು ಘಟನೆಯ ಸ್ಥಳಕ್ಕೆ ಬಂದಾಗ ಸಮಯ ಬೆಳಗ್ಗೆ **10.00** ಗಂಟೆಯಾಗಿತ್ತು. ಆರೋಪಿ ನಂ.**1** ಮತ್ತು **2** ರವರು ನನ್ನ ಮೇಲೆ ಗಲಾಟೆ ಮಾಡಿಲ್ಲ ಮತ್ತು ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ . ಆರೋಪಿಗಳು ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ . ಆರೋಪಿಗಳು ನನ್ನ ಕತ್ತನ್ನು ಹಿಸುಕಲು ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ . ಚಾಸಾ **3** ಮತ್ತು **4** ರವರು ಗಲಾಟೆ ಬಿಡಿಸಿಲ್ಲ ಎಂದರೆ ಸರಿಯಲ್ಲ . ಆಗ ಕೊರೋನಾ ಸಮಯ ಇತ್ತು ಎಂದರೆ ಸರಿಯಲ್ಲ . ಆಗ ಚುನಾವಣೆಯ ಸಮಯ ಎಂದರೆ ಸರಿ . ನಾನು ಬ್ಯಾಂಕಿನಲ್ಲಿ ಕೆಲಸ ಮಾಡುತ್ತೇನೆ. ಚುನಾವಣೆಯ ಸಮಯದಲ್ಲಿ ಆರೋಪಿಗಳಿಗೆ ವಿರುದ್ಧವಾದರ ಮಾತುಕೇಳಿ ಸುಳ್ಳು ಕೇಸು ಹಾಕಿದ್ದೇನೆಂದರೆ ಸರಿಯಲ್ಲ . ಮಹಜರು ಕಾಲಕ್ಕೆ ಸುಮಾರು **4** ರಿಂದ **5** ಜನ ಸೇರಿದ್ದರು . ನಿಪಿ **2** ನ್ನು ಪೊಲೀಸರು ನನಗೆ ಓದಿ ಹೇಳಿರುತ್ತಾರೆ . ಮಹಜರಿಗೆ ಇಬ್ಬರು ಸಹಿ ಮಾಡಿದ್ದೇವೆ . ಪೊಲೀಸರು ಸ್ಥಳಕ್ಕೆ ಬಂದಿಲ್ಲ ಮತ್ತು ಮಹಜರು ಮಾಡಿಲ್ಲ ಮತ್ತು ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ . ಮು.ಮಾ.**1***

*ರಂತಹ ಕಂಬಿಗಳು ಮನೆ ಕಟ್ಟುವ ಜಾಗದಲ್ಲಿ ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ . ಮು.ಮಾ.1 ರಿಂದ ಆರೋಪಿಗಳು ನನಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ . ಆರೋಪಿಗಳು ನನ್ನ ದಾಯಾದಿಗಳು ಆದ ಕಾರಣ ಅವರಿಗೆ ತೊಂದರೆ ನೀಡಲು ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನಾನು ಆಸ್ಪತ್ರೆಯಲ್ಲಿ ಹೇಳಿಕೆ ನೀಡಿರುತ್ತೇನೆ . ನಾನು ಸುಳ್ಳು ಮರುಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ . ನಾನು ಆರೋಪಿಗಳಿಗೆ ತೊಂದರೆ ನೀಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.*

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು).**

ಓದಿ ಹೇಳಿ ಕೇಳಿ ಸರಿಯಾಗಿದೆ.

(ಮನು ಬಿ.ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಶ್ರೀನಿವಾಸಪುರ